ಮೇಲೆ ಬೆರಳಿಟ್ಟುಕೊಂಡು ಬೆರಗಾಗುತ್ತಾರಂತೆ. ಈಗಲೂ ವೀರಾಂಜನೇಯರೆಡ್ಡಿ ಪ್ರತಿದಿನ ಈಕೆಯ ಕಾಲಿಗೆ ನಮಸ್ಕರಿಸಿಯೇ ದಿನ ನಿತ್ಯದ ಕೆಲಸಗಳನ್ನು ಪ್ರಾರಂಭಿಸುವುದಂತೆ..." ವೇಮುಲಶಾಸ್ತ್ರಿ ನನ್ನನ್ನು ಚಂದಮಾಮದ ಕಥಾಲೋಕಕ್ಕೆ ಕರೆದುಕೊಂಡು ಹೋಗುತ್ತಿದ್ದಾನೇನೋ ಎಂಬ ಭ್ರಮೆ ಕ್ಷಣ ಉಂಟಾಗಿದ್ದರೂ ಅದು ನಿಜ ಸಂಗತಿಯೇ ಆಗಿತ್ತು. ಏಕೆಂದರೆ ರೆಡ್ಡಿ ನಾಗಮ್ಮ ಎನ್ನುವ ಆಕೆಯ ಹೆಸರು ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರಿಕಾರ್ಡ್‌ನಲ್ಲಿ ದಾಖಲಾಗಿದ್ದ ಫೋಟೊವನ್ನು ಆ ಮನೆಯ ಎಲ್ಲಾ ರೂಮುಗಳಲ್ಲೂ ನೇತು ಹಾಕಲಾಗಿತ್ತು!

ನಾನೂ ಮತ್ತು ವಿಶ್ವನಾಥ ವೇಮುಲಶಾಸ್ತ್ರಿ ಅನ್ನಾವರಂನ ಸತ್ಯನಾರಾಯಣ ಸ್ವಾಮಿಯ ದರ್ಶನ ಮಾಡಿಕೊಂಡು ಚೆರ್ಲಪಲ್ಲಿ ಮನೆಗೆ ಹಿಂತಿರುಗಿದಾಗ ರಾತ್ರಿ ಎಂಟೂವರೆ ಗಂಟೆಯಾಗಿತ್ತು. ಅನ್ನಾವರಂನ ದೇವಸ್ಥಾನಕ್ಕೆ ತಲಾ ಒಂದೊಂದು ಕೇಜಿಯ ಹನ್ನೆರಡು ಚಿನ್ನದ ತೂಗು ದೀಪಗಳನ್ನು ನರಸಿಂಹರೆಡ್ಡಿಯ ಕುಟುಂಬದವರು ಕೊಟ್ಟಿರುವುದರಿಂದ ಅವರಾಗಲೀ, ಅವರ ಅತಿಥಿಗಳಾಗಲೀ ಬಂದರೆ ಇಲ್ಲಿ ಸಂಭ್ರಮದ ಅದ್ದೂರಿಯ ಸ್ವಾಗತ ಸಿಗುತ್ತದೆ. ನಾಳೆ ಬೆಳಿಗ್ಗೆ ಒಂಬತ್ತು ಗಂಟೆಗೆ ಬೆಂಗಳೂರಿಗೆ ಹೋಗಲು ವಿಶಾಖಪಟ್ಟಣದಿಂದ ಫ್ಲೈಟ್ ಬುಕ್ ಆಗಿತ್ತು. "ಈ ನರಸಿಂಹರೆಡ್ಡಿಯ ದೊಡ್ಡ ಮಗ ಆದಿಕೇಶವರೆಡ್ಡಿ ಡಿಸ್ಟಲರಿಗಳ ಮ್ಯಾನೇಜ್ಮೆಂಟ್ ನೋಡ್ಕೊತಾನೆ. ಹೆಚ್ಚಾಗಿ ಔರಂಗಾಬಾದ್‌ನಲ್ಲಿ ಇರ್ತಾನೆ. ಎರಡು ವರ್ಷಗಳ ಹಿಂದೆ ಸೇಟು ಹುಡುಗಿಯೊಬ್ಬಳನ್ನು ಪ್ರೀತಿಸಿ ಮದುವೆಯಾದ. ಮನೆಯವರೂ ಒಪ್ಪಿಕೊಂಡು ಮಾಡಿದ್ದರು. ಮದುವೆಯಾದ ತಿಂಗಳಲ್ಲೇ ಆ ಹುಡುಗಿ ಮದ್ಯ ತಯಾರಿಕೆ ವ್ಯವಹಾರ ಬೇಡ ಎಂದು ಹಟ ಹಿಡಿದಳಂತೆ. ಅವಳ ಮಾತಿಗೆ ಯಾರೂ ಸೊಪ್ಪು ಹಾಕಲಿಲ್ಲ. ಅವಳು ತೌರಿಗೆ ಹೋಗಿ ನೇಣು ಹಾಕಿಕೊಂಡಿದ್ದಳು. ಕನಿಷ್ಠ ಹೆಣ ನೋಡಲಿಕ್ಕೂ ಈ ಮನೆಯ ಒಂದು ಪಿಳ್ಳೆಯೂ ಹೋಗಿರಲಿಲ್ಲ. ಇನ್ನೂ ವಿಚಿತ್ರ ಅಂದ್ರೆ ಅದೇ ದಿನ ಆದಿಕೇಶವರೆಡ್ಡಿ ಹೈದರಾಬಾದಿನ ದೊಡ್ಡ ಜ್ಯುವೆಲರಿ ಅಂಗಡಿಯ ಯಜಮಾನನ ಮಗಳನ್ನು ರಿಜಿಸ್ಟರ್ ಮ್ಯಾರೇಜ್ ಆದ. ಸಂಸಾರ ಔರಂಗಾಬಾದ್‌ನಲ್ಲೆ ಇದೆ. ಆ ಆದಿಕೇಶವರೆಡ್ಡಿಗೆ ಅದೆಂಥದ್ದೊ ಹೊಲಸು ಮಚ್ಚೆ ಇದೆಯಂತೆ. ಹುಡುಗಿಯರಂತೂ ಅವನಿಗೆ ಸಕ್ಕರೆಗೆ ಇರುವೆಗಳು ಮುತ್ತಿಕೊಳ್ಳುವಂತೆ ಮುತ್ತಿಕೊಳ್ಳುತ್ತಾರೆ. ಸ್ಟೇಟ್ ಮತ್ತು ಸೆಂಟರ್ ಲೆವೆಲ್‌ನಲ್ಲಿ ಎಂಥ ಕೆಲಸವಿದ್ದರೂ ಪಟ್ ಅಂಥ ಮಾಡಿಸಿಕೊಂಡು ಬರ್ತಾನೆ. ಈ ಮನೆಗೆ ವರ್ಷಕ್ಕೊಂದೆರಡು ಮೂರು ಸಾರಿ ಬರ್ತಾನೆ ಅಷ್ಟೆ. ನರಸಿಂಹರೆಡ್ಡಿಗೆ ಅವನನ್ನು ಕಂಡರೆ ಪ್ರಾಣ..." ವೇಮುಲಶಾಸ್ತ್ರಿ ಆ ಮನೆಯ ಇಂಚು ಇಂಚು ಇತಿಹಾಸವನ್ನು ತಿಳಿದುಕೊಂಡ ಪಾಂಡಿತ್ಯವನ್ನು ಪ್ರದರ್ಶಿಸಲು ಹೇಳಿದನೇನೋ ಎಂದೆನಿಸಿತ್ತು ನನಗೆ. ಮಧ್ಯಾಹ್ನ ವಿಶಾಖಪಟ್ಟಣಕ್ಕೆ ಹೋಗಿದ್ದ ನರಸಿಂಹರೆಡ್ಡಿ ನಾವು ತಲುಪಿದ ಕಾಲು ಗಂಟೆಗೆ ಹಿಂತಿರುಗಿದ್ದರು.

ಅಲ್ಲಿಯೇ ಕಣವೊಂದರ ಪಕ್ಕದಲ್ಲಿದ್ದ ಮನೆಯ ಮಾಳಿಗೆಯ ಮೇಲೆ ಊಟಕ್ಕೆ ಏರ್ಪಡಿಸಲಾಗಿತ್ತು. ಬೆಳದಿಂಗಳಿನ ಜೊತೆಗೆ ಮನೆಯ ಮುಂದೆ ಉರಿಯುತ್ತಿದ್ದ ಹತ್ತಾರು ವಿದ್ಯುತ್ ದೀಪಗಳ ಬೆಳಕೂ ಸೇರಿಕೊಂಡಿತ್ತು. ನಮ್ಮೊಂದಿಗೆ ನರಸಿಂಹರೆಡ್ಡಿಯವರೂ ಸೇರಿಕೊಂಡಿದ್ದರು. ವಿವಿಧ ಬಗೆಯ ಮಟನ್, ಫಿಶ್ ಭಕ್ಷ್ಯಗಳ ಜೊತೆಗೆ ಫಾರಿನ್ ಐಸ್ ವೈನ್. ಒಂದು ಪೆಗ್ ವೈನ್ ಹೊಟ್ಟೆಗಿಳಿಸಿದ ನರಸಿಂಹರೆಡ್ಡಿ ಪಕ್ಕದಲ್ಲಿ ಇದ್ದ ಭತ್ತದ ಹುಲ್ಲಿನ ಬಣವೆಯನ್ನು ತೋರಿಸುತ್ತಾ, "ನಾನು ಒಂಬತ್ತನೇ ಕ್ಲಾಸಿನಲ್ಲಿದ್ದಾಗ ಒಂದು ಸಾರಿ ಒಂದು ದಿನ ಸಂಜೆ ಹೊಸದಾಗಿ ಬಂದ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಒಬ್ಬರು ಯಾವುದೋ ಕೇಸ್ ನಿಮಿತ್ತ ಮಾರುವೇಷದಲ್ಲಿ ಬಂದಿದ್ದರು. ಸೂರ್ಯ ಮುಳುಗಿ ಕತ್ತಲು ಆವರಿಸುತ್ತಿತ್ತು. ತಾತ ಕಣದಲ್ಲಿ ಭತ್ತದ ರಾಶಿಗೆ ಪೂಜೆ ಮಾಡುತ್ತಿದ್ದರು.